ಓ.ಎಸ್. ನಂ.159-2015

ಪಿ.ಡಬ್ಲ್ಯೂ- 1

**<u>ದಿನಾಂಕಃ 14-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಎಫ್.ಡಬ್ಲ್ಯೂ 1ನೇ ಪ್ರತಿವಾದಿ ಪರ ವಕೀಲರಿಂದಃ</u>**

**26.** ನನ್ನ ತಾಯಿಗೆ ತೀರಿಕೊಳ್ಳುವ 8 ದಿನಗಳ ಮುಂಚೆಯಿಂದ ಹುಷಾರಿರಲಿಲ್ಲ. ನನ್ನ ತಾಯಿಗೆ 2012 ರಿಂದ ಹುಷಾರಿರಲಿಲ್ಲ ಅವಳಿಗೆ 1ನೇ ಪ್ರತಿವಾದಿಯೇ ಚಿಕಿತ್ಸೆ ನೀಡುತ್ತಿದ್ದ ಅಂದರೆ ಸರಿಯಲ್ಲ. ನಾನು ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ, ದಿನಾಂಕ ನೆನಪಿಲ್ಲ. ಅವರು ಪೋನ ಮಾಡಿದಾಗ ನಾನು ಕರೆದುಕೊಂಡು ಹೋಗಿರುತ್ತೇನೆ. ನಾನು ನನ್ನ ತಾಯಿಯನ್ನು ಡಾಃ ದೇವದರ ಇವರ ಹತ್ತಿರ ಕರೆದುಕೊಂಡು ಹೋಗುತ್ತಿದ್ದೆ, ಆದರೆ ಎಷ್ಟು ಭಾರಿ ಅಂತಾ ನೆನಪಿಲ್ಲ. ನಾನು ಡಾಃ ದೇವದರ ಹತ್ತಿರ ನನ್ನ ತಾಯಿಯನ್ನು ತೆಗೆದುಕೊಂಡು ಹೋದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿ ವೈದ್ಯರು ನನ್ನ ತಾಯಿಗೆ ಹೊಟ್ಟೆಯಲ್ಲಿ ಗಡ್ಡೆ ಇರುತ್ತದೆ ಶಸ್ತ್ರಚಿಕಿತ್ಸೆ ಮಾಡಿಸಬೇಕು ಅಂತಾ ಹೇಳಿದ್ದರು. ಹೊಟ್ಟೆಯಲ್ಲಿ ಗಡ್ಡೆ ಇದ್ದ ಬಗ್ಗೆ ಬಂಕಾಪುರದ ಬೊಮ್ಮನಹಳ್ಳಿ ಡಾಕ್ಟರ ಹೇಳಿದ್ದರು. ಆ ರೀತಿ ವೈದ್ಯರು ಬರೆದುಕೊಟ್ಟ ಚೀಟಿ ನನ್ನ ಬಳಿ ಇರುವುದಿಲ್ಲ. ನಂತರ ನನ್ನ ತಾಯಿಗೆ ಆಪರೇಷನ್ ಆಗಿರುತ್ತದೆ. ಸದರಿ ಆಪರೇಷನ್ 12-13 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ಆಪರೇಷನ್ ಡಾಃ ದೇವದರ ಇವರ ಬಳಿ ಆಗಿರುತ್ತದೆ. ಆಪರೇಷನ್ ಕುರಿತು ಎಷ್ಟು ಖರ್ಚು ಆಗಿರುತ್ತದೆ ಅಂದರೆ ಸಾಕ್ಷಿಯು ಅದನ್ನು ನನ್ನ ತಂದೆ ನೋಡಿಕೊಂಡಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಾಯಿಗೆ ಏನೂ ಆಗಿತ್ತು ಅಂತಾ ನನಗೆ ಗೊತ್ತಿಲ್ಲ, ಅವರಿಗೆ ಡಾಃ ದೇವದರ ಇವರ ಬಳಿ ಯಾವುದೇ ಆಪರೇಷನ್ ಆಗಿಲ್ಲ ಅಂದರೆ ಸುಳ್ಳು.

**27**. 2012 ರಿಂದಲೂ ನನ್ನ ತಾಯಿಗೆ ಹುಷಾರಿರಲಿಲ್ಲ, ಅವಳನ್ನು 1ನೇ ಪ್ರತಿವಾದಿ ದಾವಣಗೆರೆಯ ಡಾಃ ಶಾಹ-ಅಬ್ರದ್ ಇವರ ಬಳಿ ಚಿಕಿತ್ಸೆ ಕೊಡಿಸುತ್ತಿದ್ದ ಅಂದರೆ ಸರಿಯಲ್ಲ.

ಡಾವಣಗೆರೆಯಲ್ಲಿ ನನ್ನ ತಾಯಿಗೆ ಬಿಪಿ ಹಾಗೂ ಶುಗರ್ ಇದ್ದ ಬಗ್ಗೆ ಹೇಳಿದ್ದರು. ನನ್ನ ತಾಯಿಗೆ ಕಿಡ್ನಿ ಹಾಗೂ ಲಿವರ್ ತೊಂದರೆಯಾಗಿದೆ ಅಂತಾ ಹೇಳಿದರು. ಡಾವಣಗೆರೆಗೆ ನಾನು ನನ್ನ ತಾಯಿಯೊಂದಿಗೆ ಹೋಗದೇ ಇದ್ದುದ್ದರಿಂದ ಅವಳಿಗೆ ಯಾವ ರೋಗವಿತ್ತು, ಯಾವ ಚಿಕಿತ್ಸೆ ನೀಡುತ್ತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

**28.** 2014 ನೇ ಇಸ್ವಿಯಲ್ಲಿ ಒಂದು ತಿಂಗಳ ಕಾಲ ನನ್ನ ತಾಯಿಯನ್ನು ನಾನು ನನ್ನ ಬಳಿ ಇಟ್ಟುಕೊಂಡಿದ್ದೆ ಅಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಹಾಗೂ ಉಳಿದ ವಾದಿಯರು ಮತ್ತು 2 ನೇ ಪ್ರತಿವಾದಿ ನನ್ನ ತಾಯಿಯ ಬಳಿ ಇದ್ದ ಎಲ್ಲ ಹಣವನ್ನು ಸುಳ್ಳು ಮಾಹಿತಿ ನೀಡಿ ಪಡೆದುಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಂತರ ನನ್ನ
ತಾಯಿಗೆ ಖಾಯಿಲೆ ಹೆಚ್ಚಾದ ನಂತರ ಅವಳನ್ನು ಹಾವೇರಿಗೆ ತಂದುಬಿಟ್ಟು ಹೋಗಿರುತ್ತೇವೆ ಅಂದರೆ ಸರಿಯಲ್ಲ. ದಿನಾಂಕಃ 11-09-2014 ರಂದು ನನ್ನ ತಾಯಿಗೆ ಖಾಯಿಲೆ ತೀವ್ರವಾಗಿದ್ದರಿಂದ 1 ನೇ ಪ್ರತಿವಾದಿ ಅವಳನ್ನು ಹಾವೇರಿಯ ಡಾಃ ವೀರಾಪುರ ಆಸ್ಪತ್ರೆಗೆ ಸೇರಿಸಿದ್ದ ಆ ಬಗ್ಗೆ ಆತನ ಬಳಿ ದಾಖಲೆಗಳು ಇರುತ್ತವೆ ಅಂದರೆ ಸರಿಯಲ್ಲ. ನಾವೇ ಬ್ಯಾಡಗಿಯಿಂದ ತಂದು ದಾಖಲಿಸಿರುತ್ತೇನೆ ಅಂತಾ ಹೇಳುತ್ತಾರೆ. ಅಲ್ಲಿಯ ವೈದ್ಯರು ಇಂಜೆಕ್ಷನ್ ಮಾಡುತ್ತೇವೆ ಅಂತಾ ಹೇಳಿದರು, ನಾವು ಬೇಡಾ ಅಂತಾ ಹೇಳಿ ಡಾವಣಗೆರೆಗೆ ಹೋದೆವು. ಡಾಃ ವೀರಾಪುರ ಆಸ್ಪತ್ರೆಯಲ್ಲಿ ನನ್ನ ತಾಯಿ ಒಂದು ದಿನ ಮಾತ್ರ ಇದ್ದರು. ಡಾವಣಗೆರೆಯಲ್ಲಿ ನನ್ನ ತಾಯಿಯನ್ನು ಯಾವ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಅಂತಾ ಹೆಸರು ಗೊತ್ತಿಲ್ಲ. ಡಾಃ ವೀರಾಪುರ ಆಸ್ಪತ್ರೆಗೆ ಹಾಗೂ ಡಾವಣಗೆರೆಗೆ ನನ್ನ ತಾಯಿಯನ್ನು ನಾನೇ ಕರೆದುಕೊಂಡು ಹೋಗಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 11-09-2014 ರಂದು ಡಾಃ ವೀರಾಪುರ ಆಸ್ಪತ್ರೆಯಲ್ಲಿ ನನ್ನ ತಾಯಿಗೆ ಖಾಯಿಲೆ ತೀವ್ರವಾಗಿದ್ದರಿಂದ ಅವರೇ ಹೆಚ್ಚಿನ ಚಿಕಿತ್ಸೆ ಕುರಿತು ಡಾವಣಗೆರೆಗೆ ತೆರಳುವಂತೆ ತಿಳಿಸಿದ್ದರಿಂದ ನನ್ನ ತಾಯಿಯನ್ನು 1 ನೇ ಪ್ರತಿವಾದಿ ಡಾವಣಗೆರೆಗೆ ತೆಗೆದುಕೊಂಡು ಹೋಗಿದ್ದ ಅಂದರೆ ಸರಿಯಲ್ಲ. ನಾನು ಆ ದಿನ ನನ್ನ ತಾಯಿಯೊಂದಿಗೆ ಡಾವಣಗೆರೆಗೆ ಹೋಗಿಲ್ಲ.ನಾನು ನನ್ನ ತಾಯಿಯನ್ನು ಯಾವ ಆಸ್ಪತ್ರೆಗೆ

ಕರೆದುಕೊಂಡು ಹೋಗಿರುತ್ತಾರೆ, ಏನೂ ಚಿಕಿತ್ಸೆ ನೀಡಿರುತ್ತಾರೆ ಅಂತಾ ಕೇಳಿ ತಿಳಿದುಕೊಂಡಿಲ್ಲ. ದಾವಣಗೆರೆಯಲ್ಲಿ ನನ್ನ ತಾಯಿಯನ್ನು ಐಸಿಯುನಲ್ಲಿ ಇಟ್ಟಿದ್ದರು, 1 ನೇ ಪ್ರತಿವಾದಿ ಅವರನ್ನು ತೆಗೆದುಕೊಂಡು ಹೋಗಿದ್ದ ಅಂದರೆ ಸರಿಯಲ್ಲ. ನನ್ನ ತಾಯಿಗೆ ದಾವಣಗೆರೆಯ ಡಾಃ ಎಸ್.ಎಸ್.ಭಟ್, ಇವರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಅಂದರೆ ನನಗೆ ಹೆಸರು ಗೊತ್ತಿಲ್ಲ ಅಂತಾ ಹೇಳುತ್ತಾರೆ. ಅಲ್ಲಿಯ ವೈದ್ಯರು ನನ್ನ ತಾಯಿಯ ಕಿಡ್ನಿ ಹಾಗೂ ಲಿವರ್ ಕೆಲಸ ಮಾಡುತ್ತಿಲ್ಲ ಅಂತಾ 1 ನೇ ಪ್ರತಿವಾದಿಗೆ ಹೇಳಿದ್ದರು ಅಂದರೆ ಸರಿ. ದಿನಾಂಕಃ 14-09-2014 ರಂದು ನನ್ನ ತಾಯಿ ತೀರಿಕೊಂಡಿರುತ್ತಾರೆ ಅಂದರೆ, 2014 ರಲ್ಲಿ ತೀರಿಕೊಂಡಿರುತ್ತಾರೆ ದಿನಾಂಕ ನೆನಪಿಲ್ಲ. ನನ್ನ ತಾಯಿಯ ಅಂತ್ಯಕ್ರಿಯೆಯನ್ನು ದಿನಾಂಕಃ 15-09-2014 ರಂದು ಹಾವೇರಿಯಲ್ಲಿ ಮಾಡಿರುತ್ತಾರೆ ಅಂದರೆ ಸರಿ.

**29.** ನನ್ನ ತಾಯಿಯು **ದಾದಾ ಹಯಾತ್** ಹೆಸರಿನಿಂದ ವ್ಯಾಪಾರ ಮಾಡುತ್ತಿದ್ದರು ಅಂದರೆ ಸರಿ. 1 ನೇ ಪ್ರತಿವಾದಿ ಸಹ ಇದೇ ಹೆಸರಿನಿಂದ ವ್ಯಾಪಾರ ಮಾಡುತ್ತಿದ್ದ ಅಂದರೆ ಸಾಕ್ಷಿಯು ನನ್ನ ತಂದೆ ಹಾಗೂ ತಾಯಿ ಮಾಡುತ್ತಿದ್ದರು ಅಂತಾ ಹೇಳುತ್ತಾರೆ. ನನ್ನ ತಾಯಿಗೆ ಆರೋಗ್ಯ ಸರಿಇಲ್ಲದೇ ಇದ್ದುದ್ದರಿಂದ ವ್ಯಾಪಾರವನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಅಂದರೆ ಸರಿಯಲ್ಲ. ವ್ಯಾಪಾರದ ಕುರಿತು 1 ನೇ ಪ್ರತಿವಾದಿಗೆ ಟಿನ್ ನಂಬರ ಸಹ ಇತ್ತು ಅಂದರೆ ಸರಿಯಲ್ಲ. ಟಿನ್ ನಂಬರ ಜಾರಿಯಾಗುವ ಕಾಲಕ್ಕೆ ನನ್ನ ತಾಯಿ ತನ್ನ ಒಪ್ಪಿಗೆ ಸಹ ನೀಡಿದ್ದಳು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ವ್ಯಾಪಾರ ನಡೆಸಿ ಬಂದ ಹಣವನ್ನು ನನ್ನ ತಾಯಿಯ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದ ಅಂದರೆ ಸರಿಯಲ್ಲ. ನಾನು ಮದುವೆಯಾದಗಿನಿಂದ 30 ವರ್ಷಗಳಿಂದ ಬ್ಯಾಡಗಿಯಲ್ಲಿ ವಾಸವಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಾಯಿಯ ಪರವಾಗಿ ಚೆಕ್ ಹಾಗೂ ಡಿ.ಡಿ. ಮೂಲಕ ವ್ಯವಹಾರ ನಡೆಸುತ್ತಿದ್ದ ಅಂದರೆ ಸರಿಯಲ್ಲ. ನಾನು ಹಾಗೂ ಉಳಿದ ವಾದಿಯರು ಮದುವೆಯಾದಾಗಿನಿಂದ ಗಂಡನ ಮನೆಯಲ್ಲಿ ಇದುದ್ದರಿಂದ ನನ್ನ ತಾಯಿಯ ವ್ಯಾಪಾರ ಎಷ್ಟು ಆಗುತ್ತದೆ ಅಂತಾ ನಮಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ತಂದೆಯವರಿಗೂ ಸಹ ವಯಸ್ಸಾಗಿದ್ದರಿಂದ ಹಾಗೂ ಅನಾರೋಗ್ಯ ಇದ್ದುದ್ದರಿಂದ ಓಡಾಡಲು

ಆಗುತ್ತಿರಲಿಲ್ಲ ಅಂದರೆ ಸುಳ್ಳು. ನನ್ನ ತಂದೆ ಬಡಿಗೆತನ ಕೆಲಸ ಮಾಡುತ್ತಿದ್ದರು. ನನ್ನ ತಾಯಿಯ ತಂದೆ ತೀರಿಕೊಂಡ ನಂತರ ನನ್ನ ತಂದೆ ಬಡಿಗೆತನ ಬಿಟ್ಟಿರುತ್ತಾರೆ. ನನ್ನ ತಾಯಿಯ ತಂದೆ 1985 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅಜ್ಜ ತೀರಿಕೊಂಡ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**30.** ನನ್ನ ಅಜ್ಜ ಫಕ್ರುಸಾಬ ಇವರಿಗೆ ನನ್ನ ತಾಯಿ ಒಬ್ಬಳೇ ಮಗಳು ಅಂದರೆ ಸರಿ. ನನ್ನ ಅಜ್ಜ ದಿನಾಂಕಃ 01-04-1995 ರಂದು ತೀರಿಕೊಂಡಿರುತ್ತಾರೆ ಅಂದರೆ ಸರಿಯಲ್ಲ, ಏಪ್ರೀಲ್ 01, 1985 ರಂದು ತೀರಿಕೊಂಡಿರುತ್ತಾರೆ. ನನ್ನ ಅಜ್ಜ ತೀರಿಕೊಂಡ ನಂತರ ವಾರಸಾ ಅಂತಾ ನನ್ನ ತಾಯಿ ಮಾತ್ರ ಇದ್ದಳು ಅಂದರೆ ಸರಿ. ನನ್ನ ಅಜ್ಜನ ಮರಣದ ನಂತರ ನನ್ನ ತಾಯಿಗೆ ಅವರ ಆಸ್ತಿಗೆ ಸಂಪೂರ್ಣ ವಾರಸಾ ಆಗಿರುತ್ತಾಳೆ ಅಂದರೆ ಸರಿ. ನನ್ನ ಅಜ್ಜನ ಮರಣದ ನಂತರ ಆತನ ಆಸ್ತಿ ನನ್ನ ತಾಯಿಯ ಕಬ್ಜೆಯಲ್ಲಿಯೇ ಇತ್ತು ಅಂದರೆ ಸರಿ. 2005 ನೇ ಇಸ್ವಿಯಲ್ಲಿ ದಾವಾಸ್ತಿಯಲ್ಲಿ ಪೆಟ್ರೋಲ್ ಬಂಕ್ ಹಾಕಲು ನನ್ನ ತಾಯಿ ಯೋಚಿಸಿದ್ದರು ಅಂದರೆ ಸರಿ. ಅದಕ್ಕಾಗಿ ನನ್ನ ತಾಯಿ 1 ನೇ ಪ್ರತಿವಾದಿಯೊಂದಿಗೆ ಕರಾರು ಸಹ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿರುವ ಸಹಿ ನನ್ನ ತಾಯಿಯದು ಇರುತ್ತದೆ ಅಂದರೆ, ಸಾಕ್ಷಿ ನನಗೆ ಅವರ ಸಹಿ ಗುರುತಿಸಲು ಆಗುವುದಿಲ್ಲ ಅಂತಾ ಹೇಳುತ್ತಾರೆ. ನನ್ನ ತಾಯಿ 1 ನೇ ಪ್ರತಿವಾದಿ ಹೆಸರಿಗೆ ಮೊಕ್ತೆಯಾರ ಪತ್ರ ಬರೆದುಕೊಟ್ಟ ವಿಷಯ ಗೊತ್ತಿದ್ದರು ಸಹ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾಸ್ತಿಯಲ್ಲಿ ಪೇಟ್ರೋಲ್ ಬಂಕ್ ನಡೆಸಲು ಇಂಡೇನ್ ಕಂಪನಿಗೆ ಅರ್ಜಿ ಸಹ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ತಾಯಿ ಸಹ ಅದಕ್ಕೆ ಒಪ್ಪಿಗೆ ನೀಡಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿ ಬೇಡಾ ಅಂತಾ ಹೇಳಿದ್ದರಿಂದ ದಾವಾಸ್ತಿಯಲ್ಲಿ ಪೇಟ್ರೋಲ್ ಬಂಕ್ ಬರಲಿಲ್ಲ. ಹಣಕಾಸಿನ ತೊಂದರೆಯಾಗಿದ್ದರಿಂದ ದಾವಾಸ್ತಿಯಲ್ಲಿ ಪೆಟ್ರೋಲ್ ಬಂಕ್ ಬರಲಿಲ್ಲ ಅಂದರೆ ಸುಳ್ಳು. ನನ್ನ ತಾಯಿ ಪೇಟ್ರೋಲ್ ಬಂಕ್ ನಡೆಸಲು ಬೇಡಾ ಅಂತಾ ಹೇಳಿದ್ದಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**31.** ನನ್ನ ತಾಯಿ ವ್ಯಾಪಾರದ ಜವಾಬ್ದಾರಿ ಕೊಟ್ಟ ನಂತರ 1ನೇ ಪ್ರತಿವಾದಿ ಸಾಕಷ್ಟು ಪರಿಶ್ರಮ ಪಟ್ಟು ವ್ಯಾಪಾರ ವೃದ್ಧಿಸಿರುತ್ತಾನೆ ಅಂದರೆ ಸರಿಯಲ್ಲ. ವ್ಯಾಪಾರ ನಡೆಸುವ ಕಾಲಕ್ಕೆ ಮನೆಯ ಹಾಗೂ ವ್ಯಾಪಾರದ ಬಿಲ್‌ಗಳನ್ನು 1ನೇ ಪ್ರತಿವಾದಿಯೇ ತುಂಬುತ್ತಿದ್ದ ಅಂದರೆ ಸರಿಯಲ್ಲ. ವ್ಯಾಪಾರದ ಕುರಿತು ಹಂಚುಗಳನ್ನು ನನ್ನ ತಾಯಿ ಮಂಗಳೂರಿನಿಂದ ತರಿಸುತ್ತಿದ್ದರು, ಎಷ್ಟು ಅಂತಾ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/- 14-07-2023**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

ಓ.ಎಸ್. ನಂ.159-2015
ಪಿ.ಡಬ್ಲ್ಯೂ- 1